4. ಪ್ರತಿಯೊಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪಸೀಲಿನಂತೆ ವಣ ಮತ್ತು ಹೊಂಭಳೀ ಸಂದಲು ಮರಗಳ ಜಡ ಸಹಿತ ಕೀಳಿಸಿ ಬಿಡೇ ಮರ ಕಾಮಗಾರಿಯಿಂದ ಕೋಲಿಗೆಪ್ರತಿಯೊಂದು ಹೋಬಳಿ ಯಿಂದ ರವಾನಿಸುವದಕ್ಕೆ ಟ್ಯ ಬಂದಕ್ಕೆ ಆಫೈರ್ ದರ ನಮೂದಿಸತಕ್ಕದ್ದು.

(1). ಬಣಗಿರುವ ಸಂದಲ್ ಮರಗಳು ಮತ್ತು ನೆಲದಲ್ಲಿ ಬಿಟ್ಟ ಹಳೀ ಜಡಗಳು ಜಮಾವಣಿ ಬಗ್ಯೆ.

(2). ಕ್ಷೀಣ ಹೊಂದುತ್ತಾ ಇರುವ ಸುಮಾರು ಅರ್ಧಭಾಗದವರಿವಿಗೂ ವಣಗಿರುವ ಹೊಂಭಳೀ ಎಂದು ಕರಿಯಲ್ಪಡುವ ಬಲಿತಸಂದಲ್ ಮರಗಳೂ.

(5). ಕಂಟ್ರಾಕ್ಟುದಾರನು ಲೆಖ್ಕಕ್ಕೆ ತರಲ್ಪಟ್ಟ ತೇದಾದಿನ ವೇಲೆ ಆರವಾಶಿ ವಗೈರೆ ಭರ್ತಿಗಾಗಿ ಟ್ಯ ಬಂದಕ್ಕೆ ಎರಡು ಹಂಡ್ರಡ್‌ವೇಟು ಅಂದರೆ ಕೇಕಡಾ 10 ರಂತೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

6. ಸಂದಲ್ ಮರಗಳ ಚನಾಯಿಸೋಣ, ಕೀಳುವಿಕೆ, ಬರಟು ಕೆತ್ತನೆ, ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಮಾಡುವ ರೂಲ್ಸು ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿರ ತಕ್ಕದ್ದು.

7. ಬಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೇಗುವುಳ್ಳ ಶಿಪ್ಪೆ ತಲೆಗಳು ಜಂಗಲುಗಳಲ್ಲಿ ಬಿಡಕೂಡದು. ವರಟು ಕೆತ್ತನೆ ಮಾಡದೆ ಹಾಗೆಯೇ ಕೋಲಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಛಾರ್ಜ್ ಮಾತ್ರ ಪಾವತಿ ಮಾಡ ಲ್ಪಡುತ್ತೆ. ಬುಕಣಿ ಮತ್ತು ಜೇಗು ಇರತಕ್ಕ ಜಕ್ಕೆ, ಮರಗಳ ಜೊತೆಯಲ್ಲಿಯೇ ಸಾಗಿಸಲ್ಪಡಬೇಕು.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಪ್ರತಿ ಮಾಹೆಯಲ್ಲೂ ಎಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕಮಾಡುತ್ತಾರೋ ಅಷ್ಟು ಮೊತ್ತವನ್ನು ಖಂಡಿತವಾಗಿ ಕೋಲಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ಮೊಕರೂರ್ಮಾಡಲ್ಪಡುವ ಪೆನಾಲ್‌ಟಿಗೆ ಗುರಿಯಾಗತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಬಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡಜ್ಕೆಲ್ಲದೆ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ ರಿಗಾಗಿ ಪುನಹ 100 ಬಂದು ನೂರು ರೂಪಾಯಿ ಠೇವಣೀ ಇಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದನ್ನಾ ದರೂ ತಪ್ಪಿದರೆ ಠೇವಣೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

10. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರೇ ಆಗಲಿ ತಿರಸ್ಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವ ರು ಸ್ವತಂತ್ರರಾಗಿರುತ್ತಾರೆ. ಮತ್ತು ಅಂಥಾ ಅಂಗೀಕರಿಸಲ್ಪಡುವ ಟೆಂಡರುಗಳು ಡೆಪ್ಯೂಟಿ ಕಮ್ಮಿಷನರ ಸಾಹೇಬರವ ರ ಒಪ್ಪಿಗೆಯಿಂದ ಫಾರೆಸ್ಟು ಕನ್ಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟಿರತಕ್ಕದ್ದು.

11. ಸಂದಲನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಟುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರ್ಕಾರದವರು ರಸ್ತೆಯನ್ನಾಗಲಿ ಭಂಡೀದಾರಿಯನ್ನಾಗಲಿ ಮಾಡಿಸಿಕೊಡುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಈ ನೆಪದಿಂದ ಸಂದಲ್ ವಾಯಿದೆಯಲ್ಲಿ ತಾರದೆಯಿದ್ದರೆ, ಯಾವ ಕಾರಣವೂ ಅಂಗೀಕರಿಸಲ್ಪಡಲಾರದು.

12. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಕೇಳತಕ್ಕದ್ದು. ಮತ್ತು ಅಲ್ಲಿ ನೋಟಿಸ್ ಬೋರ್ಡಿನ ವೇಲೆ ಇಸ್ತಿಹಾರುನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್
ಮೈಸೂರ್.

ಸದರ್ನ್ ಮರಾಟಾ ರೆಯಿಲ್‌ವೆ.

(ಮೈಸೂರು ಸ್ಟೇಟ್ ರೆಯಿಲ್‌ವೆ)

ನೋಟಿಸ್.

ನಂಜನಗೂಡು, ಮೈಸೂರು ಮತ್ತು ಪಶ್ಚಿಮ ವಾಹಿನೀ ರೆಯಿಲ್‌ವೆ ಸ್ಟೇಷನ್‌ಗಳಲ್ಲಿ ರೆಯಿಲ್ವೆಗೆ ಸಾಮಾನ್‌ಗಳನ್ನು ಭರ್ತೀ ಮಾ ಡುವ ಸ್ಥಳದಲ್ಲಿ ಬಿದ್ದಿರುವಂಥ ನಾಟಾಗಳ ಮಾಲೀಕರಾದ ಯೆಲ್ಲರಿಗೂ ಈ ಮೂಲಕ ತಿಳಿಯಪಡಿಸುವದೇನಂದರೆ:—

ಸದರಿಯವರುಗಳು ತಾವೇ ಖುದ್ದಾಗಿಯಾಗಲಿ ಅಥವಾ ಮುಕ್ತಾರೀಲ್‌ಕರ ಮೂಲಕವಾಗಿ ಯಾಗಲಿ ಈ 96ನೇ ಇಸವಿ ಜೂನ್ 21ನೇ ತಾರೀಖಿನ ತತ್ಪೂರ್ವವಾಗಿ ಆಯಾಯ ಸ್ಟೇಷನ್‌ಬಳಿ ಹಾಜರಾಗಿ, ತಮ್ಮ ತಮ್ಮ ನಾಟಾಗಳನ್ನು ಗುರ್ತಿಸಿ, ರೆಯಿಲ್ವೇ ಮು ಖಾಂತ್ರ ಅವುಗಳನ್ನು ಸಾಗಿಸಲಿಕ್ಕೆ ಪ್ರತಿ ಬಂದು ಭರ್ತೀ ವಾಗಿನಿಗೂ ಬಂದೊಂದು ಪೌರ್ಡರ್‌ಡಿಂಗ್ ನೋಟಿಸಂಚೆ ಕೊಡಲೆ

ಪಕ್ಷದಲ್ಲಿ, ಮೇಲೆ ನಮೂದಿಸೋಣಾದ ತಾರೀಖು ಮತ್ತು ಆ ಅನಂತರದಲ್ಲಿ—ಸದರೀ ಭರ್ತೀ ಮಾಡುವ ಸ್ಥಳದಲ್ಲಿ ಬಿದ್ದಿರುವಂಥಾ ರವಾನೆ ಬಗ್ಗೆ ಒಪ್ಪಿಸಲ್ಪಡದೆ ಇರುವಂಥಾ ಎಲ್ಲಾ ನಾಟುಗಳ ವಿಷಯದಲ್ಲಿಯೂ—ದರ ನಾಟು 1ಕ್ಕೆ ದರ ರೋಜು 1ಕ್ಕೆ 2 ಆಣೆಯಂತೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುವದು.

ಎಲ್ಲಾ ಫಾರ್ವರ್ಡಿಂಗ್ ನೋಟುಗಳಲ್ಲಿಯೂ ನಾಟುಗಳ ನಂಬರ್ ಮತ್ತು ಅವುಗಳನ್ನು ಗುರ್ತಿಸಬಹುದಾದಂಥಾ ಗುರ್ತುಗಳು ಸಹ ವಿವರಿಸಬೇಕು.

ಮೇಲೆ ನಮೂದಿಸಿರುವ ತಾರೀಖಿನ ಲಾಗಾಯ್ತು ರೈಲ್ವೇ ನಿವೇಶನಗಳಲ್ಲಿ ಹಾಲೀ ಜಮಾಯಿಸಿರುವಂಥಾ ಆ ಅನಂತರದಲ್ಲಿ ಜಮಾಯಿಸುವಂಥಾ ಎಲ್ಲಾ ನಾಟುಗಳ ಮೇಲೆಯೂ ಅವುಗಳನ್ನು ಮೇಲೆ ವಿಧಾಯಕ ಪಡಿಸಿರುವಂತೆ ರೈಲ್ವೇ ಮೂಲಕ ವೈಯ್ಯಲಿಕ್ಕೆ ಒಪ್ಪಿಸದೆ ಹೋದ ಪಕ್ಷದಲ್ಲಿ, ದರ ನಾಟು 1ಕ್ಕೆ ತಿಂಗಳು 1ಕ್ಕೆ ನಾಲ್ಕಾಣೆ ಮೇರೆ ಸ್ಥಳ (ಬಾಡಿಗೆ ಯಾನೆ) ತೀರ್ವೆಯು ಚಾರ್ಜು ಮಾಡಲ್ಪಡುತ್ತೆಂಬದನ್ನೂ ಸಹ ತಿಳಿಸಲ್ಪಟ್ಟಿದೆ.

ಬೆಂಗಳೂರು ಸಿಟಿ,
ತಾರೀಖು 30ನೇ ಮೇ 1896.

ಟಿ. ಜೆ. ಮಕ್ಲೊಯ್ರ್,
ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರ್ಟೆಂಡೆಂಟ್.

Mysore Govt. Central Press, Bangalore.—1896.